ಮಾಡುವುದಕ್ಕೆ ಸಾಕಾಗುವುದಿಲ್ಲವೆನ್ನುವುದು ನನ್ನ ಅನಿಸಿಕೆ. ಅದರ ಜೊತೆಯಲ್ಲಿ ಷೇರು ಬಂಡವಾಳವನ್ನು ಸರ್ಕಾರದಿಂದ ಪಡೆಯದೆ ಇದ್ದರೆ, ಸ್ವಾಯತ್ತತೆಯಿಂದ ಬ್ಯಾಂಕುಗಳನ್ನು ನಡೆಸುವ ರೀತಿಯಲ್ಲಿ, ನಿಜವಾಗಲು ಕುಂಠಿತವಾಗುವುದಿಲ್ಲವೆ ಎನ್ನುವ ಭಾವನೆ ನನ್ನ ಮನಸ್ಸಿನಲ್ಲಿದೆ. ಜೊತೆಗೆ ಇಲ್ಲಿ ಯಾರನ್ನು ನಾಮನಿರ್ದೇಶನ ಮಾಡುತ್ತೀರಿ, ಅವರನ್ನು ನಾಮನಿರ್ದೇಶನ ಮಾಡುವ ಸಂದರ್ಭದಲ್ಲಿ ಅದಕ್ಕೆ ಮಾನದಂಡಗಳನ್ನೇನಾದರೂ ಫಿಕ್ಸ್ ಮಾಡಿದ್ದೀರಾ? ಅಲ್ಲಿ ಯಾವ ಆಧಾರದ ಮೇಲೆ ನಾಮನಿರ್ದೇಶನ ಮಾಡುತ್ತೀರಿ, ಬಹುಶ: ನಾಮನಿರ್ದೇಶನ ಮಾಡುವ ಸಂದರ್ಭದಲ್ಲಿ ಕೆಲವೊಂದು ಗುಣಮಟ್ಟದ ಮಾನದಂಡಗಳನ್ನು ಉಪಯೋಗಿಸಬೇಕು, ಆ ಒಂದು ಸಂಸ್ಥೆಗೆ ನಾಮನಿರ್ದೇಶನವನ್ನು ಮಾಡಿದರೆ ಅವರು ಸರ್ಕಾರದ ಪರವಾಗಿ ಕೆಲಸ ಮಾಡುವ ಸಂದರ್ಭದಲ್ಲಿ ಒಂದು ಉತ್ತಮವಾದ ಜವಾಬ್ದಾರಿಯುತ ಕಾರ್ಯನಿರ್ವಹಣೆ ಮಾಡಬಹುದೆನ್ನುವುದು ನನ್ನ ಅನಿಸಿಕೆ. ಅದಕ್ಕೆ ಸಹಕಾರಿ ಸಚಿವರನ್ನು, ಆ ನಾಮನಿರ್ದೇಶನ ಮಾಡುವ ಸಂದರ್ಭದಲ್ಲಿ ಕೆಲವೊಂದು ಮಾನದಂಡಗಳನ್ನು ಉಪಯೋಗಿಸಿ ನಾಮನಿರ್ದೇಶನ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ.

ಶ್ರೀ ಲಕ್ಷ್ಮಣ ಎಸ್ ಸವದಿ: ಸರ್ಕಾರ ಕೊಟ್ಟಿರುವ ಷೇರು ಹಣದ ಬಗ್ಗೆ ಮತ್ತು ಆ ಸಂಸ್ಥೆ ಒಳ್ಳೆಯ ರೀತಿಯಲ್ಲಿ ನಡೆಯುವಂಥ ಕಾಳಜಿಯನ್ನು ವಹಿಸತಕ್ಕಂಥ ಜವಾಬ್ದಾರಿ ಅವನ ಮೇಲಿರುತ್ತದೆ. ಅದರ ಜೊತೆಗೆ ಅವರು ಇನ್ನೊಂದು ಸಲಹೆ ಕೊಟ್ಟರು ಅದೇನೆಂದರೆ, ಯಾವ ಸಂಸ್ಥೆಯಲ್ಲಿ ಷೇರು ಬಂಡವಾಳವಿರುವುದಿಲ್ಲ, ಆ ಸಂಸ್ಥೆ ಸಧೃಡವಾಗಿ ನಡೆಯುವುದಕ್ಕೆ ಸ್ವಲ್ಪ ಕುಂಠಿತವಾಗಬಹುದು, ಅಂಥ ಸಂಸ್ಥೆಗಳಿಗೆ ಷೇರು ಬಂಡವಾಳವನ್ನು ಕೊಡುವ ಚಿಂತನೆಯಾಗಬೇಕೆನ್ನುವ ರೀತಿಯಲ್ಲಿ ಅವರು ಒಂದು ಸೂಚನೆಯನ್ನು ಕೊಟ್ಟಿದ್ದಾರೆ. ಯಾವುದೇ ಸಂಸ್ಥೆಯವರು, ನಮ್ಮ ಸಂಸ್ಥೆಗೆ ಷೇರು ಬಂಡವಾಳ ಬೇಕೆಂದು ಬೇಡಿಕೆಯನ್ನಿಟ್ಟಾಗ ಷೇರು ಬಂಡವಾಳವನ್ನು ಕೊಡುವುದಕ್ಕೆ ಚಿಂತನೆಯನ್ನು ಮಾಡುತ್ತದೆ, ನಾವು ಕೊಡುವುದಕ್ಕು ಕೂಡ ಪ್ರಯತ್ನ ಮಾಡುತ್ತೇವೆ ಎನ್ನುವ ಮಾತನ್ನು ತಮ್ಮ ಮುಖಾಂತರ ಈ ಸಂದರ್ಭದಲ್ಲಿ ಅವರಿಗೆ ಹೇಳಬಯಸುತ್ತೇನೆ.

ಜಲಾಯನ ಮತ್ತು ಬಂಜರು ಭೂಮಿ ಅಭಿವೃದ್ಧಿಯ ಬಗ್ಗೆ

71(541) ಶ್ರೀ ಕೆ.ಅಭಯಚಂದ್ರ ಜೈನ್:(ಮೂಡಬಿದ್ರೆ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

1) ಮೂಡಬಿದರೆ ಕ್ಷೇತ್ರದಲ್ಲಿ ಕಳೆದ 2 ವರ್ಷಗಳಲ್ಲಿ ಜಲಾನಯನ ಮತ್ತು ಬಂಜರು ಭೂಮಿ ಅಭಿವೃದ್ಧಿ ಯೋಜನೆಯಡಿ ಎಷ್ಟು ಹಣ ಖರ್ಚು ಮಾಡಲಾಗಿದೆ(ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ವಿವರ ನೀಡುವುದು)?

ಶ್ರೀ ಎಸ್ ಎ ರವಿಂದ್ರನಾಥ್(ಕೃಷಿ ಸಚಿವರು):

1) ಮೂಡಬಿದರೆ ಕ್ಷೇತ್ರದಲ್ಲಿ ಕಳೆದ 2 ವರ್ಷಗಳಲ್ಲಿ 179.321 ಲಕ್ಷರೂಗಳನ್ನು ಬಂಜರು ಭೂಮಿ ಅಭಿವೃದ್ಧಿ ಮತ್ತು ಇತರೆ ಜಲಾನಯನ ಅಭಿವೃದ್ಧಿ ಯೋಜನೆಗಳಡಿಯಲ್ಲಿ ವೆಚ್ಚಮಾಡಲಾಗಿದೆ.

ಕಳೆದ 2 ವರ್ಷಗಳಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ವಿವರಗಳನ್ನು ಅನುಬಂಧ 1 ಮತ್ತು 2ರಲ್ಲಿ ನೀಡಿದೆ.

2008–09ನೇ ಸಾಲಿನಲ್ಲಿ ವಿವಿಧ ಜಲಾನಯನ ಅಭಿವೃದ್ಧಿ ಯೋಜನೆಗಳಡಿಯಲ್ಲಿ ಮೂಡಬಿದರೆ ಕ್ಷೇತ್ರದಲ್ಲಿ ವೆಚ್ಚ ಮಾಡಿದ ಅನುದಾನ ಮತ್ತು ಅನುಷ್ಠಾನ ಮಾಡಿದ

ಕಾಮಗಾರಿಗಳ ವಿವರ

ಕ್ರ ಸಂ	ಯೋಜನೆಯ ಹೆಸರು	ವೆಚ್ಚ ಮಾಡಿದ ಅನುದಾನ (ಲಕ್ಷ. ರೂ.)	ಅನುಷ್ಠಾನಗೊಳಿಸಿದ ಕಾಮಗಾರಿಗಳು	
			ಕಾಮಗಾರಿಗಳ ಹೆಸರು	ಸಂ/ಹೆ/ಬ್ಲಾಕ್
1	ಸಮಗ್ರ ಬಂಜರು ಭೂಮಿ ಅಭಿವೃದ್ಧಿ ಯೋಜನೆ	83.791	ಕಿಂಡಿ ತಡೆ ಅಣೆ	20 ಸಂ.
			ತಡೆ ಅಣೆ	4 ಸಂ.
			ನಾಲಾ ತಡೆ ಗೋಡೆ	9 ಬ್ಲಾಕ್
			ಜಪಾನ್ ಕಾಂಪೋಸ್ಟ್ ಪಿಟ್	3 ಸಂ

			ಮದಗ ಹೂಳೆತ್ತುವುದು	1 ಸಂ
			ಕೃಷಿ ಹೊಂಡ	1 ಸಂ
			ತೋಟಗಾರಿಕೆ ಸಸಿ ನಾಟಿ	137 ಹೆ
			ಅರಣ್ಯ ಸಸಿ ನೆಟ್ಟಿರುವುದು	225 ಹೆ
			ಮೇವು ಅಭಿವೃದ್ಧಿ	36 ಹೆ
2	ಟಿ.ಎಸ್.ಪಿ(ಕೇಂದ್ರ)–ಐ.ಟಿ.ಡಿ.ಪಿ	2	ತಡೆ ಆಣೆ	1 ಸಂ
			ಮದಗ ಹೂಳೆತ್ತುವುದು	1 ಸಂ
3	ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆ	9.12	ಕಿಂಡಿ ತಡೆ ಅಣೆ	4 ಸಂ
			ನಾಲಾ ತಡೆ ಗೋಡೆ	6 ಬ್ಲಾಕ್
4	ವಿಶೇಷ ಘಟಕ ಯೋಜನೆ(ಟಿ.ಪಿ)	0.4	ನಾಲಾ ತಡೆ ಗೋಡೆ	1 ಬ್ಲಾಕ್
5	ಗಿರಿಜನ ಉಪ ಯೋಜನೆ(ಟಿ.ಪಿ)	0.3	ನಾಲಾ ತಡೆ ಗೋಡೆ	1 ಬ್ಲಾಕ್
	ಒಟ್ಟು	95.611		

ಅನುಬಂಧ–2

2009–10ನೇ ಸಾಲಿನಲ್ಲಿ ವಿವಿಧ ಜಲಾನಯನ ಅಭಿವೃದ್ಧಿ ಯೋಜನೆಗಳಡಿಯಲ್ಲಿ ಮೂಡಬಿದರೆ ಕ್ಷೇತ್ರದಲ್ಲಿ ವೆಚ್ಚ ಮಾಡಿದ ಅನುದಾನ ಮತ್ತು ಅನುಷ್ಠಾನ ಮಾಡಿದ ಕಾಮಗಾರಿಗಳ ವಿವರ

ಕ್ರ ಸಂ	ಯೋಜನೆಯ ಹೆಸರು	ವೆಚ್ಚ ಮಾಡಿದ ಅನುದಾನ (ಲಕ್ಷರೂ)	ಅನುಷ್ಟಾನಗೊಳಿಸಿದ ಕಾಮಗಾರಿಗಳು	
			ಕಾಮಗಾರಿಗಳ ಹೆಸರು	ಸಂ/ಹೆ/ಬ್ಲಾಕ್
1	ಸಮಗ್ರ ಬಂಜರು ಭೂಮಿ ಅಭಿವೃದ್ಧಿ ಯೋಜನೆ	35.76	ಕಿಂಡಿ ತಡೆ ಅಣೆ	9 ಸಂ.
			ನಾಲಾ ತಡೆ ಗೋಡೆ	2 ಬ್ಲಾಕ್
			ಅರಣ್ಯ ಸಸಿ ನೆಟ್ಟಿರುವುದು	100 ಹೆ
			ತೋಟಗಾರಿಕೆ ಸಸಿ ನಾಟಿ	56 ಹೆ
			ಮೇವು ಅಭಿವೃದ್ಧಿ	15 ಹೆ
2	ಸಮಗ್ರ ಜಲಾನಯನ ನಿರ್ವಹಣೆ ಯೋಜನೆ	24–15	ಕಿಂಡಿ ತಡೆ ಅಣೆ	9 ಸಂ
			ಮದಗ ಹೂಳೆತ್ತುವುದು	1 ಸಂ
3	ಮಳೆ ನೀರು ಕೊಯ್ಲು ಯೋಜನೆ	13.43	ಕಿಂಡಿ ತಡೆ ಅಣೆ	7 ಸಂ

			ತಡೆ ಅಣೆ	1 ಸಂ
4	ವಿಶೇಷ ಘಟಕ ಯೋಜನೆ	3.80	ಕಿಂಡಿ ತಡೆ ಅಣೆ	1 ಸಂ
			ತಡೆ ಅಣೆ	1 ಸಂ
			ಅಲ್ಪ ಆಳದ ಬಾವಿ	2 ಸಂ
			ನಾಲಾ ತಡೆ ಗೋಡೆ	1 ಬ್ಲಾಕ್
5	ಗಿರಿಜನ ಉಪ ಯೋಜನೆ	6.58	ಭೂ ಮಟ್ಟ ಮಾಡುವುದು	2 ಬ್ಲಾಕ್
			ಅಲ್ಪ ಆಳದ ಬಾವಿ	1 ಸಂ
			ಕಿಂಡಿ ತಡೆ ಅಣೆ	1 ಸಂ
			ತಡೆ ಅಣೆ	1 ಸಂ
	ಒಟ್ಟು	83.71		

ಶ್ರೀ ಕೆ ಅಭಯಚಂದ್ರ ಜೈನ್: ಮಾನ್ಯ ಅಧ್ಯಕ್ಷರೆ, ಉತ್ತರವನ್ನೇನೋ ಕೊಟ್ಟಿದ್ದಾರೆ, ಇವತ್ತು ಜಲಾನಯನ ಇಲಾಖೆಯಿಂದ ದೊಡ್ಡ ಪ್ರಮಾಣದ ಹಣ ಇದಕ್ಕೆ ವ್ಯಯವಾಗಿದೆ. ಆ ಕಾಮಗಾರಿಯನ್ನು ಒಂದು ಬದ್ದತೆ ಬರುವ ರೀತಿಯಲ್ಲಿ ಆಗುವಂತೆ ಅಧಿಕಾರಿಗಳಿಗೆ ಸೂಚನೆಯನ್ನು ಕೊಡಬೇಕಾಗಿದೆ, ಇಲ್ಲಿ ಕಾಮಗಾರಿಯ ಪಟ್ಟಿಯನ್ನು ಮಾತ್ರ ಕೊಟ್ಟಿದ್ದಾರೆ. ಅಲ್ಲಿ ಕಿಂಡಿ ತಡೆಗಾಗಿ ಸುಮಾರು 33 ಲಕ್ಷವನ್ನು 20 ಕಾಮಗಾರಿಗಳಿಗೆ ವ್ಯಯ ಮಾಡಿದ್ದಾರೆ, ಏಕೆಂದರೆ, ಒಂದು ಕಿಂಡಿ ಅಣೆಕಟ್ಟು ಮಾಡಿದಾಗ 5–6 ವರ್ಷವಾದರೂ ಬಾಳಿಕೆ ಬರಬೇಕು, 1–2 ವರ್ಷದಲ್ಲಿ ಆ ಕಾಮಗಾರಿಗಳು ನಾಶವಾದಾಗ ಸರ್ಕಾರದ ಹಣ ಅಪವ್ಯಯವಾಗುತ್ತದೆ. ಆದುದರಿಂದ ಈ ಇಲಾಖೆಯಲ್ಲಿ ಹದ್ದುಬಸ್ತು ತರುವಂಥ ಕೆಲಸವನ್ನು ನಮ್ಮ ಕೃಷಿ ಸಚಿವರಿಂದಾಗಬೇಕು. ಜಿಲ್ಲಾ ಪಂಚಾಯತಿಯಲ್ಲಿ ಬೇಕಾದಷ್ಟು ಕ್ರಮ ತೆಗೆದುಕೊಂಡರೂ ಕೂಡ ಅಲ್ಲಿ ಯಾವುದೇ ಉತ್ತಮ ಮಟ್ಟದ ಕಾಮಗಾರಿ ಆಗುತ್ತಿಲ್ಲ.

ಶ್ರೀ ಎಸ್ ಎ ರವೀಂದ್ರನಾಥ್: ಆ ರೀತಿ ಯಾವುದೇ ಕಾಮಗಾರಿಗಳು ಕಳಪೆಯಾಗಿದ್ದರೆ, ಸುಮಾರಾಗಿ ಇದ್ದರೆ, ಅಲ್ಲಿಯ ಅಧಿಕಾರಿಗಳು ಗಮನಕ್ಕೆ ತಂದರೆ, ಸರಿಯಾದ ರೀತಿಯಾಗಿ ಮಾಡುವಂಥ ಪ್ರಯತ್ನವನ್ನು ಮಾಡುತ್ತೇನೆ.

ಸುವರ್ಣರಸ್ತೆ, ಎಸ್‌ಸಿಪಿ, ಟಿಎಸ್‌ಪಿ, ಯೋಜನೆಗಳ ಅನುಷ್ಠಾನದ ಬಗ್ಗೆ

75(124) ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ:(ಚಿಕ್ಕೋಡಿ ಸದಲಗ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆ ವತಿಯಿಂದ ಸುವರ್ಣರಸ್ತೆ ಎಸ್‌ಸಿಪಿ: ಟಿಎಸ್‌ಪಿ ಯೋಜನೆಗಳನ್ನು ಯಾವ ವರ್ಷದಿಂದ ಜಾರಿಗೊಳಿಸಲಾಗುತ್ತಿದೆ. ಈ ಯೋಜನೆ ಅನುಷ್ಠಾನಗೊಳಿಸಲು ಅನುಸರಿಸಲಾಗುತ್ತಿರುವ ಮಾರ್ಗಸೂಚಿಗಳೇನು, ಹಾಗಿದ್ದಲ್ಲಿ, ಈ ಮಾರ್ಗಸೂಚಿಗಳನ್ವಯವೇ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆಯೇ?

ಆ) ಈ ಯೋಜನೆಗಳ (ಸುವರ್ಣ ರಸ್ತೆ ಎಸ್‌ಸಿಪಿ:ಟಿಎಸ್‌ಪಿ) ಅಡಿಯಲ್ಲಿ ಚಿಕ್ಕೋಡಿ–ಸದಲಗಾ ಮತಕ್ಷೇತ್ರ ವ್ಯಾಪ್ತಿಯಲ್ಲಿ ಈ ಯೋಜನೆಗಳು ಜಾರಿಗೆ ಬಂದಂದಿನಿಂದ ಯಾವ್ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ, ಕೈಗೆತ್ತಿಕೊಂಡಿರುವ ಕಾಮಗಾರಿಗಳು ಪೂರ್ಣಗೊಂಡಿವೆಯೇ: ಇಲ್ಲದಿದ್ದಲ್ಲಿ ಕಾರಣವೇನು?

ಇ) ಈ ಕಾಮಗಾರಿಗಳಿಗೆ ಮಂಜೂರಾತಿ ನೀಡುವಾಗ ಸಂಬಂಧಪಟ್ಟ ವಿಧಾನಸಭಾ ಕ್ಷೇತ್ರದ ಶಾಸಕರ ಗಮನಕ್ಕೆ ತರಲಾಗಿದೆಯೇ? ಇಲ್ಲದಿದ್ದಲ್ಲಿ ಕಾರಣವೇನು (ಸಂಪೂರ್ಣ ಮಾಹಿತಿ ನೀಡುವುದು)

ಶ್ರೀ ಸಿ ಎಂ ಉದಾಸಿ(ಲೋಕೋಪಯೋಗಿ ಸಚಿವರು):

ಅ) ಲೋಕೋಪಯೋಗಿ ಇಲಾಖೆ ವತಿಯಿಂದ ಸುವರ್ಣರಸ್ತೆ ವಿಕಾಸ ಯೋಜನೆಯು 2009–10ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಹಾಗೂ ಎಸ್‌ಸಿಪಿ: ಟಿಎಸ್‌ಪಿ ಯೋಜನೆಗಳನ್ನು 2007–08ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ.